# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

**ಎಸ್.ಸಿ ಸಂ: 96/2019**

ಯಾದಗಿರಿ ಗ್ರಾಮಾಂತರ ಪೋಲೀಸ್ ಠಾಣೆ .........ಫಿರ್ಯಾದಿ

**// ವಿರುದ್ದ //**

ಲಚಮಯ್ಯ ತಂದೆ ಕೃಷ್ಣಪ್ಪ ಹಲಗೇರ ..... ಆರೋಪಿ

## ದೋಷಾರೋಪಣೆ

ನಾನು **ಬಿ.ಜಯಂತ ಕುಮಾರ್, ಬಿ.ಎ.ಲಾ., ಎಲ್.ಎಲ್.ಎಮ್,** ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**,** ಯಾದಗಿರಿ**,** ಆರೋಪಿಯಾದ**:**

ಲಚಮಯ್ಯ ತಂದೆ ಕೃಷ್ಣಪ್ಪ ಹಲಗೇರ, ವ: 31 ವರ್ಷ, ಉ: ಕೂಲಿಕೆಲಸ, ವಾಃ ತೊರಣತಿಪ್ಪ, ತಾಃ ಮತ್ತು ಜಿಃ ಯಾದಗಿರಿ.

**ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.**

ಯಾದಗಿರಿ ಗ್ರಾಮಾಂತರ ಪೋಲೀಸ ಠಾಣಾ ಹದ್ದಿಯ ಪೈಕಿ ವರ್ಕನಳ್ಳಿ ಗ್ರಾಮದಲ್ಲಿ, ಮೃತ ಅನೀತಾ ಇವರು ನಿಮ್ಮೊಂದಿಗೆ ಎರಡು ವರ್ಷಗಳ ಹಿಂದೆ ಮದುವೆಯಾಗಿದ್ದು, ಮದುವೆಯಾದ ಒಂದೂವರೆ ವರ್ಷದ ನಂತರ ನೀವು ಮೃತ ಅನೀತಾಳಿಗೆ **"ನಿನಗೆ ಬೇರೆಯವನ ಜೊತೆಗೆ ಅನೈತಿಕ ಸಂಬಂಧ ಇದೆ, ನೀನು ಬೇರೆಯವನ ಜೊತೆ ಮಾತಾಡುತ್ತೀ, ನೀನು ನಮ್ಮ ಮನೆಯಲ್ಲಿ ಇರಬೇಡಾ ಎಲ್ಲಾದರೂ ಹೋಗಿ ಸಾಯಿ"** ಅಂತಾ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿ, ತನ್ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.**498(ಎ)** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಕೊನೆಯದಾಗಿ ದಿನಾಂಕಃ 16.07.2019 ರಂದು ಮದ್ಯಾಹ್ನ 3.30 ರಿಂದ 4.30 ಗಂಟೆಯ ಅವಧಿಯಲ್ಲಿ ನೀವು ಮೃತ ಅನೀತಾಳಿಗೆ ಎಲ್ಲಾದರೂ ಹೋಗಿ ಸಾಯಿ ಅಂತಾ ಪ್ರಚೋದನೆ ನೀಡಿದ್ದರಿಂದ, ಅನಿತಾಳು ತನ್ನ ತವರು ಮನೆಯಲ್ಲಿ ಕಬ್ಬಿಣ್ಣದ ಪೈಪಿಗೆ ಸೀರೆಯಿಂದ ಉರುಲು ಹಾಕಿಕೊಂಡು ಮೃತಪಟ್ಟಿರುತ್ತಾಳೆ, ತನ್ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.**306** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕ **07.11.2023** ರಂದು ಆದೇಶಿಸಿದ್ದೇನೆ.

**ಸ್ಥಳ: ಯಾದಗಿರಿ**

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
**ಯಾದಗಿರಿ**